**ಸಾಕ್ಷಿಯನ್ನು ದಿಃ 13.12.2024 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 4 ಪರ ಶ್ರೀM.G.ವಕೀಲರಿಂದ.**

ಕಳೆದ ಬಾರಿ ಪಾಟೀ ಸವಾಲಿನಲ್ಲಿ ಚುನಾವಣಾ ಗುರುತಿನ ಚೀಟಿ ಪಡಿತರ ಚೀಟಿ ತರುವುದಾಗಿ ಹೇಳಿದ್ದು ಈ ದಿನ ತಂದಿರುವುದಿಲ್ಲ. ನನ್ನ ತಂದೆಯ ತಂದೆ ಯಾವಾಗ ಮರಣ ಹೊಂದಿರುತ್ತಾರೆಂದು ನನಗೆ ಗೊತ್ತಿಲ್ಲ ನಾನು ಅವರನ್ನು ನೋಡಿಲ್ಲ. ಅವರ ಮರಣ ಪ್ರಮಾಣ ಪತ್ರ ನನ್ನ ಬಳಿ ಇರುವುದಿಲ್ಲ. ನನ್ನತಾತ ತಿಮ್ಮಯ್ಯ ಅವರಿಗೆ ಗಂಗತಿಮ್ಮಯ್ಯ ಮತ್ತು ತಿಮ್ಮಯ್ಯ ಅವರು ಮಕ್ಕಳು ಇದ್ದು ಹೆಣ್ಣು ಮಕ್ಕಳು ಇರುವುದಿಲ್ಲ. ಗಂಗತಿಮ್ಮಯ್ಯ ಅವರು ಮರಣ ಹೊಂದಿದ್ದು ಯಾವಾಗ ಎಂದು ಗೊತ್ತಿಲ್ಲ ಅವರ ಮರಣ ಪ್ರಮಾಣ ಪತ್ರ ನನ್ನ ಬಳಿ ಇರುವುದಿಲ್ಲ. ಅವರನ್ನು ನಾನು ನೋಡಿರುತ್ತೇನೆ.

ಗಂಗತಿಮ್ಮಯ್ಯ ಅವರ ಹೆಂಡತಿ ಮರಣ ಹೊಂದಿದ್ದು ಅವರ ಮಗಳು ಇರುತ್ತಾರೆ. ಗಂಗತಿಮ್ಮಯ್ಯ ಅವರ ಹೆಂಡತಿ ಲಕ್ಷ್ಮಮ್ಮಾ ಅವರು ಯಾವಾಗ ಮರಣ ಹೊಂದಿದ್ದಾರೆಂದು ನನಗೆ ಗೊತ್ತಿಲ್ಲ ಅವರ ಮರಣ ಪ್ರಮಾಣ ಪತ್ರ ನನ್ನ ಬಳಿ ಇರುವುದಿಲ್ಲ. ಗಂಗತಿಮ್ಮಯ್ಯ ಅವರ ಮಕ್ಕಳಾದ ಚಂದ್ರಮ್ಮಾ ಆರಣೆಯಲ್ಲಿದ್ದು ಚಿಕ್ಕಮ್ಮ ಮಾಯಸಂದ್ರದಲ್ಲಿದ್ದಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಪ್ರತಿವಾದಿ 5 ಮತ್ತು 6 ಈ ದಾವೆಯಲ್ಲಿ ಸಲ್ಲಿಸಿದ ಪ್ರತಿವಾದ ಪತ್ರವನ್ನು ನಾನು ತಿಳಿದುಕೊಂಡಿರುತ್ತೇನೆ.

ನಿ.ಪಿ 1 ದಾಖಲೆಯನ್ನು ಪಡೆಯುವ ಸಮಯದಲ್ಲಿ ಆಧಾರ ಕಾರ್ಡ, ಪಡಿತರ ಚೀಟಿ ಚುನಾವಣಾ ಗುರುತಿನ ಚೀಟಿಯನ್ನು ನೀಡಿರುತ್ತೇನೆ. ನನ್ನ, ನನ್ನ ಅಕ್ಕನದ್ದು ಮತ್ತು ನನ್ನ ತಾಯಿಯ ಗುರುತಿನ ಚೀಟಿಯನ್ನು ಹಾಜರುಮಾಡಿರುತ್ತೇನೆ. ಆ ಸಮಯದಲ್ಲಿ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ನಿ.ಪಿ 1 ಅನ್ನು ದಿಃ 01.08.2017 ರಂದು ಪಡೆದುಕೊಂಡಿರುತ್ತೇವೆ ಎಂದರೆ ಸರಿ.

ನರಸಿಂಹಯ್ಯ ಅವರ ಕುಟುಂಬದ ಯಾವುದೇ ದಾಖಲೆಗಳನ್ನು ನಾನು ನೀಡಿಲ್ಲ. ಆಧಾರ ಕಾರ್ಡ, ಪಡಿತರ ಚೀಟಿ ಮತ್ತು ಚುನಾವಣಾ ಗುರುತಿನ ಚೀಟಿ ಆಧಾರದ ಮೇಲೆ ನಿ.ಪಿ 1 ಅನ್ನು ತಯಾರು ಮಾಡಿಸಿರುತ್ತೇನೆ. ನಿ. ಪಿ 1 ರಲ್ಲಿ ತಿಮ್ಮಯ್ಯ ಮತ್ತು ನರಸಿಂಹಯ್ಯ ಯಾರ ಮಕ್ಕಳೆಂದು ನಮೂದು ಮಾಡಿಲ್ಲವೆಂದರೆ ಸರಿ. ತಿಮ್ಮಯ್ಯ ಅವರ ಕುಟುಂದಕ್ಕೂ ಟಿ. ನರಸಿಂಹಯ್ಯ ಕುಟುಂಬಕ್ಕೂ ಯಾವುದೇ ರೀತಿಯ ಸಂಬಂದ ಇಲ್ಲವೆಂದರೆ ಸರಿಯಲ್ಲ. ತಿಮ್ಮಯ್ಯ ಅವರ ಕುಟುಂದಕ್ಕೂ ಟಿ. ನರಸಿಂಹಯ್ಯ ಕುಟುಂಬಕ್ಕೂ ಯಾವುದೇ ರೀತಿಯ ಸಂಬಂದ ಇಲ್ಲದ ಕಾರಣ ನಿ.ಪಿ 1 ರಲ್ಲಿ ಅವರ ಕುಟುಂಬದ ಮೂಲ ಪುರುಷ ಯಾರೆಂದು ನಮೂದು ಮಾಡಿಲ್ಲವೆಂದರೆ ಸರಿಯಲ್ಲ.

ಟಿ. ನರಸಿಂಹಯ್ಯ ಮುದ್ದೆಗೌಡ ಅವರ ಮಗ ಆಗಿರುತ್ತಾರೆ. ಅವರು ಮುದ್ದೆಗೌಡ ಅವರ ಮಗ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ನಿ.ಪಿ1 ರಲ್ಲಿ ಟಿ. ನರಸಿಂಹಯ್ಯ ಎಂದು ನಮೂದು ಇದ್ದು ಟಿ ಎಂದರೆ ಏನು ಎಂದು ನನಗೆ ಗೊತ್ತಿಲ್ಲ. ನಿ.ಪಿ 1 ತಯಾರು ಮಾಡಲು ಯಾವ ಆಧಾರದ ಮೇಲೆ ಮಾಹಿತಿ ನೀಡಿದ್ದೀರಿ ಎಂದರೆ ಸಾಕ್ಷಿ ಅವರನ್ನು ಟಿ. ನರಸಿಂಹಯ್ಯ ಎಂತಲೇ ಕರೆಯುತ್ತಿದ್ದರು ಎಂದು ಹೇಳುತ್ತಾರೆ. ನರಸಿಂಹಯ್ಯ ಅವರು ತಾಯಿಯ ಹೆಸರು ನನಗೆ ಗೊತ್ತಿಲ್ಲ. ನರಸಿಂಹಯ್ಯ ಅವರು ತಾತ ಮತ್ತು ಅಜ್ಜಿಯ ಹೆಸರು ನನಗೆ ಗೊತ್ತಿಲ್ಲ. ನರಸಿಂಹಯ್ಯ ಅವರ ಹೆಂಡತಿಯ ಹೆಸರು ದೊಡ್ಡರಂಗಮ್ಮಾ ಉರಫ್. ಓಬಳಮ್ಮಾ ಆಗಿರುತ್ತದೆ. ನರಸಿಂಹಯ್ಯ ಮತ್ತು ದೊಡ್ಡರಂಗಮ್ಮಾ ಅವರಿಗೆ ಇಬ್ಬರು ಮಕ್ಕಳು ಇರುತ್ತಾರೆ.

ನರಸಿಂಹಯ್ಯ ಅವರನ್ನು ನಾನು ನೋಡಿಲ್ಲ ಅವರು ಎಲ್ಲಿ ಮತ್ತು ಯಾವಾಗ ಮರಣ ಹೊಂದಿರುತ್ತಾರೆಂದು ನನಗೆ ಗೊತ್ತಿಲ್ಲ. ನರಸಿಂಹಯ್ಯ ಅವರಿಗೆ 6 ಜನ ಮಕ್ಕಳು ಎಂದರೆ ಸರಿಯಲ್ಲ. ಮೊದಲನೆಯ ಎನ್. ಜಯಮ್ಮಾ ಅವರನ್ನು ಗುಬ್ಬಿಯ ನರಸಿಂಹಯ್ಯ ಅವರಿಗೆ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅವರು ಬದುಕಿರುತ್ತಾರೆ ಎಂದರೆ ಸರಿಯಲ್ಲ.

2 ನೇ ಮಗಳು ಎನ್. ಸಾವಿತ್ರಮ್ಮ ಆಗಿದ್ದು ಅವರನ್ನು ಬೆಂಗಳೂರಿನ ನಾಗರಾಜು ಎನ್ನುವವರಿಗೆ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 4 ಅವರಿಗೆ ದೇವಿಂದ್ರ ಮತ್ತು ರಾಮಕೃಷ್ಣ ಎನ್ನುವ ಇಬ್ಬರೂ ಸಹೋದರರಿದ್ದು ಅವರು ಸಹ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಅವರೂ ಸಹ ಟಿ. ನರಸಿಂಹಯ್ಯ ಅವರ ಮಕ್ಕಳಾಗಿರುತ್ತಾರೆ ಎಂದರೆ ಸರಿಯಲ್ಲ. ನಾಗೇಂದ್ರ ಅವರ ಹೆಂಡತಿಯ ಹೆಸರು ಗೌರಮ್ಮಾ ಆಗಿರುತ್ತದೆ. ಅವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಅವರು ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ 1 ಅವರ ಹೆಂಡತಿಯ ಹೆಸರು ಉಮಾ ಆಗಿದ್ದು ಅವರು ಯಾವ ಊರಿನವರು ಎಂದು ಗೊತ್ತಿಲ್ಲ. ಕೃಷ್ಣ ಅವರ 4 ಜನ ಮಕ್ಕಳನ್ನು ಎಲ್ಲಿಗೆ ಕೊಟ್ಟು ಮದುವೆ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ.

ಟಿ. ನರಸಿಂಹಯ್ಯ ಮತ್ತು ತಿಮ್ಮಯ್ಯ ಅವರಿಗೆ ಯಾವುದೇ ಸಂಬಂಧ ಇರದೆ ಇರುವ ಕಾರಣ ಅವರ ಮೂಲ ಪುರುಷನ ಹೆಸರನ್ನು ನಿ.ಪಿ 1 ರಲ್ಲಿ ತೋರಿಸಿಲ್ಲ ಮತ್ತು ನಿ.ಪಿ 1 ಅನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಿಮ್ಮಯ್ಯ ಅವರ ಅಣ್ಣ ಗಂಗತಿಮ್ಮಯ್ಯ ಅವರ ಕುಟುಂಬಕ್ಕೂ 1 ಮತ್ತು 4 ನೇ ಪ್ರತಿವಾದಿ ಕುಟುಂಬಕ್ಕೂ ಯಾವುದೇ ಸಂಬಂದ ಇಲ್ಲವೆಂದರೆ ಸರಿಯಲ್ಲ.

ಮುದ್ದೆಗೌಡರ ತಂದೆಯ ಹೆಸರು ನನಗೆ ಗೊತ್ತಿಲ್ಲ. ನರಸಿಂಹಯ್ಯ ಅವರ ಎಲ್ಲಾ ವಾರಸ್ಸುದಾರರನ್ನು ಈ ದಾವೆಯಲ್ಲಿ ಸೇರಿಸಿಲ್ಲವೆಂದರೆ ಸರಿಯಲ್ಲ. ವಂಶವೃಕ್ಷವನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲಾತಿಯನ್ನು ನಾನು ಪ್ರತಿವಾದಿಗಳ ಕುಟುಂಬಕ್ಕೆ ಸೇರಿದವರನೆಂದು ತೋರಿಸಲು ಹಾಜರು ಪಡಿಸಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 4 ಈಗ ಶಿವಮೊಗ್ಗದಲ್ಲಿದ್ದಾರೆ. 30 ರಿಂದ 40 ವರ್ಷಗಳಿಂದ ಅವರು ಶಿವಮೊಗ್ಗದಲ್ಲಿ ವಾಸಿಸುತ್ತಿದ್ದಾರೆ. ನಮಗೆ ಮೋಸ ಮಾಡುವ ಉದ್ದೇಶದಿಂದ ಶಿವಮೊಗ್ಗದಲ್ಲಿ ವಾಸ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ.

ಶಿವಮೊಗ್ಗದಲ್ಲಿ ನರಸಿಂಹಯ್ಯ ಅವರು ವಾಸ ಇರಲಿಲ್ಲವೆಂದು ಹೇಳುತ್ತಾರೆ. ನರಸಿಂಹಯ್ಯ ಅವರ ತಂದೆ ಏನು ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನರಸಿಂಹಯ್ಯ ಅವರು ತಂದೆ ಮತ್ತು ತಾತ ಶಿವಮೊಗ್ಗದಲ್ಲಿ ಆಸ್ತಿಗಳು ಇರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ 1 ಮತ್ತು 4 ಯಾವ ಉದ್ದೇಶಕ್ಕೆ ಶಿವಮೊಗ್ಗಕ್ಕೆ ಹೋಗಿ ಸೇರಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಕೆಲಸದ ನಿಮಿತ್ಯ ಅಲ್ಲಿ ಹೋಗಿ ಸೇರಿಕೊಂಡಿದ್ದು ಏನು ಕೆಲಸ ಮಾಡುತ್ತಾರೆಂದು ಗೊತ್ತಿಲ್ಲವೆಂದು ಹೇಳುತ್ತಾರೆ. ನರಸಿಂಹಯ್ಯ ಅವರ ತಂದೆ ಮತ್ತು ತಾತನ ನಡುವೆ ವಿಭಾಗ ಆಗಿತ್ತಾ ಮತ್ತು ಅವರ ಕುಟುಂಬಕ್ಕೆ ಎಷ್ಟು ಆಸ್ತಿಗಳು ಇದ್ದವು ಎಂದು ಗೊತ್ತೀದೆಯಾ ಎಂದರೆ ಸಾಕ್ಷಿ ಜಲದಗೆರೆಯಲ್ಲಿ ಮಾತ್ರ ಆಸ್ತಿ ಇತ್ತು ಎಂದು ಹೇಳುತ್ತಾರೆ. ನರಸಿಂಹಯ್ಯ ಅವರ ತಂದೆ ಮತ್ತು ತಾತನ ನಡುವೆ ಭಾಗ ಆಗಿರಲಿಲ್ಲ. ನರಸಿಂಹಯ್ಯ ಅವರು ಮದ್ಯ ಮಾರಾಟ ಮಾಡುತ್ತಿದ್ದರು.

ಪ್ರತಿವಾದಿ 1 ಮತ್ತು 4 ಅವರ ತಂದೆ ರೈಲ್ವೇ ಇಲಾಖೆಯಲ್ಲಿ ಪೊಲಿಸ ಪೇದೆಯಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಿ.ಪಿ 2 ರಲ್ಲಿ ನಮೂದು ಇರುವ ತಿಮ್ಮಯ್ಯ ಬಿನ್ ಜುಂಜೇಗೌಡ ಎನ್ನುವವರು ಯಾರು ಎಂದರೆ ಸಾಕ್ಷಿ ತಿಮ್ಮಯ್ಯ ನನ್ನ ತಂದೆಯ ತಂದೆ ಆಗಿರುತ್ತಾರೆಂದು ಹೇಳುತ್ತಾರೆ. ನಂತರ ಅವರು ಯಾರು ಎಂದು ಗೊತ್ತಿಲ್ಲವೆಂದು ಹೇಳುತ್ತಾರೆ. ನಿ.ಪಿ 3 ರಲ್ಲಿ ನಮೂದು ಇರುವ ಮುದ್ದೆಗೌಡ ಅವರ ಮಗ ತಿಮ್ಮಯ್ಯ ಯಾರು ಎಂದರೆ ಸಾಕ್ಷಿ ತಿಮ್ಮಯ್ಯ ನನ್ನ ತಾತ ಮದ್ದೆಗೌಡ ನನ್ನ ತಾತನ ತಂದೆ ಎಂದು ಹೇಳುತ್ತಾರೆ.

ನಿ.ಪಿ3 ರಲ್ಲಿರುವ ತಿಮ್ಮಯ್ಯ ಬಿನ್ ಮುದ್ದೆಗೌಡ ಅವರ ಹೆಸರನ್ನು ವಂಶವೃಕ್ಷದಲ್ಲಿ ನಮೂದು ಮಾಡಿಲ್ಲ. ನಿ.ಪಿ 2 ರಲ್ಲಿರುವ ತಿಮ್ಮಯ್ಯ ಬೆನ್ ಜುಂಜೆಗೌಡ ಮತ್ತು ನಿ.ಪಿ 3 ರಲ್ಲಿ ಇರುವ ತಿಮ್ಮಯ್ಯ ಬಿನ್ ಮುದ್ದೆಗೌಡ ಅವರಿಗೆ ಏನು ಸಂಬಂದ ಎಂದರೆ ಸಾಕ್ಷಿ ಅವರೆಲ್ಲರೂ ಅಣ್ಣತಮ್ಮಂದಿರು ಎಂದು ಹೇಳುತ್ತಾರೆ. ಜುಂಜೆಗೌಡ ಮತ್ತು ಮದ್ದೆಗೌಡ ಅಣ್ಣ ತಮ್ಮಂದಿರು ಆಗಿರುತ್ತಾರೆ. ಅವರಿಬ್ಬರೂ ಯಾರ ಮಕ್ಕಳು ಎಂದು ನನಗೆ ಗೊತ್ತಿಲ್ಲ.

ತಿಮ್ಮಯ್ಯ ಬಿನ್ ಜುಂಜೇಗೌಡ ಎಂದು ನಿ.ಪಿ 2 ರಲ್ಲಿ ಇದ್ದು 10 ವರ್ಷಗಳ ಬಳಿಕ ತಿಮ್ಮಯ್ಯ ಬಿನ್ ಮುದ್ದೇಗೌಡ ಎಂದು ಯಾವ ಆಧಾರದ ಮೇಲೆ ಬದಲಾವಣೆ ಆಗಿರುತ್ತದೆಂದು ನನಗೆ ಗೊತ್ತಿಲ್ಲ. ನಿ.ಪಿ 11 ರಲ್ಲಿ ದೊಡ್ಡರಂಗಮ್ಮಾ ಪ್ರತಿವಾದಿ 1 ಮತ್ತು 4 ಅವರು ತಾಯಿ ಎಂದರೆ ಸರಿ. ಟಿ. ನರಸಿಂಹಯ್ಯ ಅವರ ಮರಣಾ ನಂತರ ದೊಡ್ಡರಂಗಮ್ಮಾ ಅವರ ಹೆಸರಿಗೆ ಯಾವ ಆಧಾರದ ಮೇರೆಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

ನಿ.ಪಿ 11 ರಲ್ಲಿ ನಮೂದು ಇರುವ ಎಂ.ಆರ್. 41/2006-2007 ಅನ್ನು ಹಾಜರುಪಡಿಸಿರುತ್ತೇನೆ. ಯಾವ ಆಧಾರದ ಮೇರೆಗೆ ಖಾತೆ ಬದಲಾವಣೆ ಆಗಿರುತ್ತದೆಂದು ನಿ.ಪಿ 22 ಅನ್ನು ಓದಿ ತಿಳಿದುಕೊಂಡಿರುವುದಿಲ್ಲ. ನಿ.ಪಿ 12 ರಲ್ಲಿ ಇರುವ ಎನ್.ಕೃಷ್ಣ ಈ ಕೇಸಿನ 1 ನೇ ಪ್ರತಿವಾದಿ ಎಂದರೆ ಸರಿ. ಪ್ರತಿವಾದಿ 1 ಅವರ ಹೆಸರಿಗೆ ಎಂ.ಆರ್. 23/2007-2008 ರಂತೆ ಖಾತೆ ಬದಲಾವಣೆ ಆಗಿದ್ದು ದಾನ ಪತ್ರದ ಆಧಾರದ ಮೇಲೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ದಾನ ಪತ್ರವನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನಿ.ಪಿ 45 ಅನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ. ದೊಡ್ಡರಂಗಮ್ಮಾ ಅವರಿಗೆ ನಿ.ಪಿ 45 ರಲ್ಲಿ ನಮೂದು ಇರುವಂತೆ ಆಸ್ತಿ ಯಾವ ರೀತಿ ಬಂದಿರುತ್ತೇದೆಂದು ನಾನು ಓದಿ ತಿಳಿದುಕೊಂಡಿರುತ್ತೇನೆ. ದೊಡ್ಡರಂಗಮ್ಮಾ ಅವರು ಸಹಿ ಮಾಡುತ್ತಿದ್ದರಾ ಅಥವಾ ಹೆಬ್ಬಟ್ಟಿನ ಗುರುತು ಹಾಕುತ್ತಿದ್ದರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ. ನರಸಿಂಹಯ್ಯ ಅವರು ಸಹಿ ಮಾಡುತ್ತಿದ್ದರು. ನರಸಿಂಹಯ್ಯ ಅವರ ಕುಟುಂಬದಲ್ಲಿ ನರಸೇಗೌಡ ಎನ್ನುವವರು ಇದ್ದ ಬಗ್ಗೆ ಗೊತ್ತಿಲ್ಲ. ನಮ್ಮ ಕುಟುಂಬದಲ್ಲಿ ನರಸೆಗೌಡ ಎನ್ನುವವವರು ಇದ್ದ ಬಗ್ಗೆ ನನಗೆ ಗೊತ್ತಿಲ್ಲ.

ನಿ.ಪಿ 23 ರಲ್ಲಿ ನರಸೆಗೌಡ ಎಂದು ನಮೂದು ಇದ್ದು ಅವರನ್ನು ಅವರ ಕುಟುಂಬದವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ನರಸೇಗೌಡ ಅವರು ಬದುಕಿದ್ದಾರಾ ಅಥವಾ ಮರಣ ಹೊಂದಿದ್ದಾರಾ ಮತ್ತು ಅವರ ವಾರಸ್ಸುದಾರರು ಯಾರೆಂದು ನನಗೆ

ಗೊತ್ತಿಲ್ಲವೆಂದು ಹೇಳುತ್ತಾರೆ. ನಿ.ಪಿ 24 ರಲ್ಲಿ ನಮೂದು ಇರುವ ದೊಡ್ಡ ರಂಗಮ್ಮಾ 1 ಮತ್ತು 4 ನೇ ಪ್ರತಿವಾದಿಯ ತಾಯಿ ಎಂದರೆ ಸರಿ. ದೊಡ್ಡರಂಗಮ್ಮಾ ಅವರಿಗೆ ಕ್ರಯ ಆದ ಬಗ್ಗೆ ನಿ.ಪಿ 24 ರಲ್ಲಿ ನಮೂದು ಇದ್ದು ಸದರಿ ಕ್ರಯ ಪತ್ರವನ್ನು ನಾನು ಪಡೆದಿಲ್ಲ ಮತ್ತು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿ.ಪಿ 45 ರ ಮೂಲಕವೇ ಸರ್ವೆ ನಂ 69/3 ರಲ್ಲಿರುವ 1 ಎಕರೆ 8 ಗುಂಟೆಯನ್ನು ಪ್ರತಿವಾದಿ 1 ಅವರಿಗೆ ನೀಡಿರುತ್ತಾರೆ ಎಂದರೆ ಸರಿ.

ಮಾರ್ಚ 2014 ರಲ್ಲಿ ನಿ.ಪಿ 45 ದಾಖಲೆ ನನ್ನ ಗಮನಕ್ಕೆ ಬಂದಿರುತ್ತದೆ. ನಾವು ಪಹಣಿ ತೆಗೆದು ನೋಡಿದಾಗ ನಿ.ಪಿ 45 ದಾಖಲೆ ಆದ ಬಗ್ಗೆ ನನಗೆ ಗೊತ್ತಾಗಿರುತ್ತದೆ. ಸದರಿ ದಾಖಲೆಯನ್ನು ದಾವೆ ದಾಖಲು ಮಾಡಿದ 3 ವರ್ಷಗಳ ಬಳಿಕ ನಾನೇ ಪಡೆದಿರುತ್ತೇನೆ. ನಿ.ಪಿ 45 ಅನ್ನು ಪಡೆಯಲು ಅರ್ಜಿ ನೀಡಿದ ನರಸಿಂಹಮೂರ್ತಿ ಎಂದು ನಮೂದು ಆಗಿರುವವರು ಯಾರೆಂದು ನನಗೆ ಗೊತ್ತಿಲ್ಲ. ನಿ.ಪಿ 45 ರ ಆಧಾರದ ಮೇರೆಗೆ ಸರ್ವೆ ನಂ 69/3 ಮತ್ತು 69/4 ರ ಖಾತೆ ಪಹಣಿ ಪ್ರತಿವಾದಿ 1 ಅವರ ಹೆಸರಿಗೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ತದನಂತರ ನಿ.ಪಿ 46 ರಂತೆ ಪ್ರತಿವಾದಿ 1 ಮತ್ತು ಅವರು ಮಕ್ಕಳು ಪ್ರತಿವಾದಿ 7 ರವರಿಗೆ ಸದರಿ ಸ್ವತ್ತುಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಿ.ಪಿ 46 ಅನ್ನು ಪಡೆಯಲು ಮೋಹನಕುಮಾರ ಎನ್ನುವವರು ಅರ್ಜಿ ನೀಡಿದ್ದು ಅವರು ಯಾರು ಎಂದು ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ.

ನಿ.ಪಿ 46 ಕ್ರಯ ಪತ್ರದ ಆಧಾರದ ಮೇರೆಗೆ ಪ್ರತಿವಾದಿ 7 ಅವರ ಹೆಸರಿಗೆ ಈ ಮೇಲೆ ಹೇಳಿದ ಸ್ವತ್ತುಗಳ ಖಾತೆ ಪಹಣಿ ಬದಲಾವಣೆ ಆಗಿರುತ್ತವೆ ಎಂದರೆ ಸರಿ. ಖಾತೆ ಬದಲಾವಣೆ ಮಾಡುವ ಸಮಯದಲ್ಲಿ ಪ್ರತಿವಾದಿ 4 ಅವರು ತಮ್ಮ ಸಹಿ ಪಡೆದಿರುವುದಿಲ್ಲವೆಂದು ತಕರಾರು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ತದನಂತರ ನಿ.ಪಿ 47 ರಂತೆ ಸದರಿ ಕ್ರಯ ಪತ್ರಕ್ಕೆ ನನ್ನ ಒಪ್ಪಿಗೆ ಇದೆ ಎಂದು ದಾಖಲೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ.ನಂತರ ನಿ.ಪಿ 49 ರ ತಹಸಿಲ್ದಾರಅವರ ಆದೇಶದಿಂದ ಪ್ರತಿವಾದಿ 7 ಅವರ ಹೆಸರಿಗೆ ಖಾತೆ ಪಹಣಿ ಬದಲಾವಣೆ ಆಗಿರುತ್ತವೆ ಎಂದರೆ ಸರಿ. ನಾನು ದಾನ ಮತ್ತು ಕ್ರಯ ಪತ್ರದಲ್ಲಿನ ಚಕ್ಕುಬಂದಿಯನ್ನು ನೋಡಿ ನನ್ನ ವಾದ ಪತ್ರದಲ್ಲಿ

ಬರೆಸಿರುತ್ತೇನೆ.

ಕ್ರಯ ಪತ್ರ ಆದಾಗಿನಿಂದ ಪ್ರತಿವಾದಿ 7 ಅವರೇ 2 ಸ್ವತ್ತುಗಳ ಸ್ವಾಧೀನದಲ್ಲಿ ಸದ್ಭವಣಾ ಕ್ರಯದಾರರಾಗಿ ಮಾಲಿಕರಾಗಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ನಾವು ಇದ್ದೇವೆ ಎಂದು ಹೇಳುತ್ತಾರೆ. ಸರ್ವೆ ನಂ 69/3 ಮತ್ತು 69/4 ರ ಕಂದಾಯ ದಾಖಲೆಗಳನ್ನು ನಾನು ಯಾವುದೆ ಕಂದಾಯ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ. 2008 ರಲ್ಲಿ ಪ್ರತಿವಾದಿ 7 ಅವರಿಗೆ ಕ್ರಯ ಆಗುವ ಮೊದಲು ಪ್ರತಿವಾದಿ 1 ಮತ್ತು 4 ಕಂದಾಯವನ್ನು ಕಟ್ಟುತ್ತಿದ್ದು ಈಗ ಪ್ರತಿವಾದಿ 7 ಅವರು ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಸರಿ. ನಾನಾಗಲಿ ನನ್ನ ತಂದೆ ತಿಮ್ಮಯ್ಯ ಅವರು ಆಗಲಿ 2 ಸ್ವತ್ತುಗಳಿಗೆ ಕಂದಾಯ ಕಟ್ಟಿದ ಬಗ್ಗೆ ದಾಖಲೆಗಳು ಹಾಜರು ಪಡಿಸಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್.